KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ
"NAAC Accredited with "A" Grade 2022"

Pavate Nagar, Dharwad
ಪಾವಟೆನಗರ, ಧಾರವಾಡ

Fax No. 0837-2741928
Tel Ph No. 0836-2215267
Website : www.kud.ac.in

ನಂ:/ಕವಿವಿ/ಪರೀಕ್ಷಾ/ಜಿಎಡಿ/2022-23/1200 ದಿನಾಂಕ: 09/02/2023

## ಸುತ್ತೋಲೆ

ವಿಷಯ : ಮಾರ್ಚ/ಎಪ್ರಿಲ್-2022 ರಲ್ಲಿ ಜರುಗಿದ ರಾಷ್ಟ್ರೀಯ ಶಿಕ್ಷಣ ನೀತಿ-2020 (NEP) ರ ಅಡಿಯ ಎಲ್ಲ ಸ್ನಾತಕ ಪದವಿಗಳ 1 ನೇ ಸೆಮೆಸ್ಟರ್ ಪರೀಕ್ಷಾ ಫಲಿತಾಂಶಗಳನ್ನು UUCMS ತಂತ್ರಾಂಶದ ಮುಖಾಂತರ ಪ್ರಕಟಿಸಿದ್ದು, ಮುಂದಿನ ಹಂತದ ಪರೀಕ್ಷಾ ಪ್ರಕ್ರಿಯೆಗಳನ್ನು ಜರುಗಿಸುವ ಕುರಿತು.

ಉಲ್ಲೇಖ : ಮಾನ್ಯ ಕುಲಪತಿಗಳ ಆದೇಶ ದಿನಾಂಕ:09/02/2023

****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ತಿಳಿಸುವುದೇನೆಂದರೆ, ಮಾರ್ಚ/ಎಪ್ರಿಲ್-2022 ರಲ್ಲಿ ಜರುಗಿದ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅಡಿಯ ಎಲ್ಲ ಸ್ನಾತಕ ಪದವಿಗಳ 1 ನೇ ಸೆಮೆಸ್ಟರ್ ಪರೀಕ್ಷಾ ಫಲಿತಾಂಶಗಳನ್ನು UUCMS ತಂತ್ರಾಂಶದ ಮುಖಾಂತರ ಪ್ರಕಟಿಸಲಾಗಿದ್ದು, ಫಲಿತಾಂಶದ ನಂತರ ಮುಂದಿನ ಹಂತದ ಪರೀಕ್ಷಾ ಪ್ರಕ್ರಿಯೆಗಳ ಕುರಿತು ಕೆಳಗಿನ ಅಂಶಗಳನ್ನು ಅನುಸರಿಸುವುದು.

1. UUCMS ತಂತ್ರಾಂಶದ ಮುಖಾಂತರ NEP 1 ನೇ ಸೆಮೆಸ್ಟರ್ ಫಲಿತಾಂಶವನ್ನು ಪ್ರಕಟಿಸಲಾಗಿದ್ದು ವಿದ್ಯಾರ್ಥಿಗಳಿಗೆ ಶೀಘ್ರದಲ್ಲಿಯೇ **ಮರು ಮೌಲ್ಯಮಾಪನ/ಶರತ್ ಮೌಲ್ಯಮಾಪನ/ಅಂಕಗಳ ಮರುಎಣಿಕೆ/ ಉತ್ತರ ಪತ್ರಿಕೆಗಳ ಛಾಯಾಪ್ರತಿ** ಪಡೆಯಲು ದಿನಾಂಕಗಳನ್ನು ನೀಡಿ ಪ್ರತ್ಯೇಕ ಸುತ್ತೋಲೆಯನ್ನು ಹೊರಡಿಸಲಾಗುವುದು.
2. ಪ್ರಸ್ತುತವಾಗಿ ಫೆಬ್ರುವರಿ/ಮಾರ್ಚ-2023 ರಲ್ಲಿ ಜರುಗಲಿರುವ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅಡಿಯ 3ನೇ ಸೆಮಿಸ್ಟರ್‌ನ ರೆಗ್ಯೂಲರ್ ಹಾಗೂ 1ನೇ ಸೆಮೆಸ್ಟರ್ ರೆಗ್ಯೂಲರ್/ರಿಪಿಟರ್ಸ್ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಭರಿಸುವ ಹಾಗೂ ಮರುಮೌಲ್ಯಮಾಪನ ಶುಲ್ಕ ಭರಿಸುವ ಕಾರ್ಯಗಳು ಏಕಕಾಲಕ್ಕೆ ಬಂದಿರುವುದರಿಂದ 1 ನೇ ಸೆಮೆಸ್ಟರ್ ರಿಪಿಟರ್ಸ್ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಹಾಗೂ ಅಗತ್ಯವಿದ್ದಲ್ಲಿ ಮರುಮೌಲ್ಯಮಾಪನ ಶುಲ್ಕ ಭರಿಸಿ ಅರ್ಜಿ ಸಲ್ಲಿಸುವುದು. ಒಂದು ವೇಳೆ ಸದರ ವಿದ್ಯಾರ್ಥಿಗಳು ಮರುಮೌಲ್ಯನದಲ್ಲಿ ಉತ್ತೀರ್ಣರಾದಲ್ಲಿ ಅವರು ಭರಿಸಿದ ಪರೀಕ್ಷಾ ಶುಲ್ಕವನ್ನು ಮರುಪಾವತಿ ಮಾಡಲಾಗುವುದು. ಈ ವಿಷಯವಾಗಿ ವಿದ್ಯಾರ್ಥಿಗಳು ಮರುಮೌಲ್ಯಮಾಪನದ ಅರ್ಜಿಯ ಪ್ರತಿ, ಮರುಮೌಲ್ಯಮಾಪನದಲ್ಲಿ ಉತ್ತೀರ್ಣರಾದ ಅಂಕಪಟ್ಟಿ ಪ್ರತಿ, ಪರೀಕ್ಷಾ ಶುಲ್ಕ ಭರಿಸಿದ ಪ್ರತಿ ಹಾಗೂ ವಿದ್ಯಾರ್ಥಿಗಳ ಬ್ಯಾಂಕ್ ವಿವರದ ಪ್ರತಿ ಲಗತ್ತಿಸಿ ಪ್ರಾಚಾರ್ಯರ ಮುಖಾಂತರ ಲಿಖಿತ ರೂಪದಲ್ಲಿ ಮನವಿ ಸಲ್ಲಿಸುವುದು.
3. ಮುಂದುವರೆದು, ಒಂದು ವೇಳೆ UUCMS ತಂತ್ರಾಂಶದಲ್ಲಿ ಫಲಿತಾಂಶವು ಉತ್ತೀರ್ಣ ಎಂದು ನಮೂದಾಗಬೇಕಿದ್ದ ವಿದ್ಯಾರ್ಥಿಗೆ ತಾಂತ್ರಿಕ ಕಾರಣಗಳಿಂದ ಅನುತ್ತೀರ್ಣ ಎಂದು ಬಂದಿರುವಂತಹ ಸಂದರ್ಭಗಳಲ್ಲಿ ಅಂತಹ ವಿದ್ಯಾರ್ಥಿಯು ಪರೀಕ್ಷಾ ಶುಲ್ಕ ಹಾಗೂ ಮರುಮೌಲ್ಯಮಾಪನ ಶುಲ್ಕ ಈ ಎರಡೂ ಶುಲ್ಕವನ್ನು ಭರಿಸಿ, ತದನಂತರ ವಿದ್ಯಾರ್ಥಿಯ ಫಲಿತಾಂಶ ಉತ್ತೀರ್ಣ ಎಂದು ಬಂದಲ್ಲಿ ಆ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಹಾಗೂ ಮರುಮೌಲ್ಯಮಾಪನ ಶುಲ್ಕ ಈ ಎರಡೂ ಶುಲ್ಕಗಳನ್ನು ಮರುಪಾವತಿ ಮಾಡಲಾಗುವುದು. ಸದರ ವಿದ್ಯಾರ್ಥಿಗಳು ಅಂಶ '2' ರಲ್ಲಿ ಸೂಚಿಸಿದಂತೆ ಪ್ರಾಚಾರ್ಯರ ಮುಖಾಂತರ ಲಿಖಿತ ರೂಪದಲ್ಲಿ ಮನವಿ ಸಲ್ಲಿಸುವುದು.
4. UUCMS ತಂತ್ರಾಂಶದ NEP 1 ನೇ ಸೆಮೆಸ್ಟರ್ ಪರೀಕ್ಷೆಗಳಲ್ಲಿ MPC ಪ್ರಕರಣದಡಿ ಸಿಲುಕಿ ಈಗಾಗಲೇ MPC ಸಮಿತಿ ಸಭೆಯ ನಿರ್ಣಯದಂತೆ ಫೆಬ್ರುವರಿ/ಮಾರ್ಚ-2023 ರಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿ ಪಡೆದ ವಿದ್ಯಾರ್ಥಿಗಳ ಪರೀಕ್ಷಾ ಫಾರ್ಮ ಜನರೇಟ್ ಆಗದ ಸಂದರ್ಭಗಳಲ್ಲಿ ಅಂತಹ ವಿದ್ಯಾರ್ಥಿಗಳಿಂದ ಈ ಮೊದಲಿನ ಪದ್ಧತಿಯನ್ವಯ SBI ಆನ್‌ಲೈನ್ ವ್ಯವಸ್ಥೆಯ ಮುಖಾಂತರ ಪರೀಕ್ಷಾ ಶುಲ್ಕವನ್ನು ಭರಿಸಿಕೊಂಡು ಸದರ ವಿವರಗಳನ್ನು ಅಗತ್ಯ ದಾಖಲೆಗಳೊಂದಿಗೆ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು. ಮುಂದುವರೆದು, UUCMS ತಂತ್ರಾಂಶದಲ್ಲಿ ಕೊಠಡಿವಾರು ವಿದ್ಯಾರ್ಥಿಗಳ ಬ್ಲಾಕ್(Block) ಗಳನ್ನು ನಮೂದಿಸುವಾಗ ಆ ವಿದ್ಯಾರ್ಥಿಗಳ ವಿವರಗಳನ್ನು ಕೊನೆಯ ಬ್ಲಾಕ್‌ನಲ್ಲಿ ನಮೂದಿಸಿ ಪರೀಕ್ಷೆಗೆ ಹಾಜರುಪಡಿಸುವುದು.

ಮೇಲ್ಕಾಣಿಸಿದ ಎಲ್ಲ ಅಂಶಗಳನ್ನು ಸಂಬಂಧಿಸಿದ ಎಲ್ಲ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ತಂದು ಅದರಂತೆ ಎಲ್ಲ ಪ್ರಾಚಾರ್ಯರು ಕ್ರಮ ವಹಿಸುವುದು.

9/2/23
ಕುಲಸಚಿವರು(ಮೌಲ್ಯಮಾಪನ)

ಗೆ,

ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು.